KAHS610026082020

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ**

**ಉಪಸ್ಥಿತರು : ಶ್ರೀಮತಿ ಕುಸುಮ.ವಿ.** ಬಿ.ಎ.ಎಲ್., ಎಲ್ ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಸಿ.ಸಿ. ಸಂಖ್ಯೆ:1038/2020**
**ದಿನಾಂಕ : 10 ನೇ ಜುಲೈ 2026**

**ಫಿರ್ಯಾದಿದಾರರು :** ರಾಜ್ಯದ ಪರವಾಗಿ
ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆ.

**(ಪ್ರತಿನಿಧಿಸುವವರು : ಸಹಾಯಕ ಸರ್ಕಾರಿ ಅಭಿಯೋಜಕರಿಂದ)**

**ವಿರುದ್ಧ**

**ಆರೋಪಿ :**

1. ರುದ್ರಸ್ವಾಮಿ ಎನ್,
ಬಿನ್ ನಂಜುಂಡಪ್ಪ ಪಿ,
ಸುಮಾರು 61 ವರ್ಷ,

2. ಪಾರಿಜಾತ,
ಕೋಂ ರುದ್ರಸ್ವಾಮಿ,
ಸುಮಾರು 55 ವರ್ಷ,

3. ಜಗದೀಶ ಎನ್.ಆರ್,
ಬಿನ್ ರುದ್ರಸ್ವಾಮಿ,
ಸುಮಾರು 35 ವರ್ಷ,
**(ಮೃತಪಟ್ಟಿರುತ್ತಾರೆ)**

ಎಲ್ಲರ ವಾಸಃ ವಿದ್ಯಾನಗರ,

ಚನ್ನರಾಯಪಟ್ಟಣ ಟೌನ್,
ಹಾಸನ ಜಿಲ್ಲೆ.

**(ಶ್ರೀ ಕೆ.ಆರ್.ವಿ., ವಕೀಲರಿಂದ)**

| | | | |
|---|---|---|---|
| 1. | ಘಟನೆ ಸಂಭವಿಸಿದ ದಿನಾಂಕ | ಃ | 02.10.2020 |
| 2. | ಘಟನೆ ವರದಿಯಾದ ದಿನಾಂಕ | ಃ | 03.10.2020 |
| 3. | ಫಿರ್ಯಾದಿದಾರರ ಹೆಸರು | ಃ | ರಾಣಿ |
| 4. | ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | ಃ | 21.12.2023 |
| 5. | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | ಃ | 24.02.2026 |
| 6. | ಆರೋಪಿಸಲಾದ ಅಪರಾಧಗಳು | ಃ | ಭಾ.ದಂ.ಸಂ. ಕಲಂ. 506, 504, 323, 324, 354 ಸಹವಾಚಕ ಕಲಂಃ 34 |
| 7. | ನ್ಯಾಯಾಧೀಶರ ಅಭಿಪ್ರಾಯ | ಃ | ಕೊನೆಯ ಆದೇಶದಂತೆ. |

## ತೀರ್ಪು

ಆರಕ್ಷಕ ಉಪನಿರೀಕ್ಷಕರು, ನಗರ ಪೊಲೀಸ್ ಠಾಣೆ, ಚನ್ನರಾಯಪಟ್ಟಣ, ಇವರು ಆರೋಪಿತರು **ಭಾ.ದಂ.ಸಂ. ಕಲಂಃ** 506, 504, 323, 324 ಮತ್ತು 354 ಸಹವಾಚಕ ಕಲಂಃ 34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಮಾಡಿದ್ದಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆ :-**

ದಿನಾಂಕ 02-10-2020 ರಂದು ಚನ್ನರಾಯಪಟ್ಟಣ ಟೌನ್ ವಿದ್ಯಾನಗರದ ಸಾಕ್ಷಿ-1 ರವರ ಮನೆ ಬಳಿ ಸಾಕ್ಷಿ-1 ರವರು ಸಾಕ್ಷಿ-2 ಮತ್ತು ಸಾಕ್ಷಿ-3 ರವರೊಂದಿಗೆ ಇರುವಾಗ 1 ರಿಂದ 3ನೇ ಆರೋಪಿತರು ಮಳೆಯ ನೀರು ಹೋಗಲು ಕಾಂಪೌಂಡ್ ಗೋಡೆಗೆ ತೂತು ಮಾಡಿರುವ ವಿಚಾರದಲ್ಲಿ ದ್ವೇಷವಿಟ್ಟುಕೊಂಡು, ಆರೋಪಿತರು ಸಮಾನ ಉದ್ದೇಶದಿಂದ ಸಾಕ್ಷಿ-1 ರವರ ಜೊತೆ ಜಗಳ ತೆಗೆದು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ 1ನೇ ಆರೋಪಿಯು ಸಾಕ್ಷಿ-1 ರವರಿಗೆ ಕಬ್ಬಿಣದ ಹಾರೆಯಿಂದ ಹೊಡೆಯಲು ಬಂದಿದ್ದು ಅಗ ಬಿಡಿಸಲು ಬಂದ ಸಾಕ್ಷಿ-3 ರವರಿಗೆ ಹಾರೆಯಿಂದ ಪೆಟ್ಟುಬಿದ್ದು ಸಾಮಾನ್ಯ ಸ್ವರೂಪದ ಗಾಯವಾಗಿದ್ದು ನಂತರ ಸಾಕ್ಷಿ-1 ರವರಿಗೆ 2ನೇ ಆರೋಪಿಯು ತಲೆ ಕೂದಲು ಹಿಡಿದು ಎಳೆದಾಡಿ ಕೈಗಳಿಂದ ಮೈಕೈಗೆ ಹೊಡೆದು ನೋವುಂಟು ಮಾಡಿ ಅವಾಚ್ಯ ಶಬ್ದಗಳಿಂದ ಬೈಯು ಬಟ್ಟೆಯನ್ನು ಹರಿದು ಹಾಕಿದ್ದು,

ನಂತರ 1ನೇ ಆರೋಪಿಯು ಸಾಕ್ಷಿ-1 ರವರಿಗೆ ಕೈಗಳಿಂದ ಮೈ ಕೈಗೆ ಹೊಡೆದು ಸಾಕ್ಷಿ-1 ರವರ ಚೂಡಿದಾರ್ ಟಾಪ್ ನ್ನ ಹರಿದು ಹಾಕಿರುತ್ತಾರೆ, ನಂತರ ಆರೋಪಿತರು ಸಾಕ್ಷಿ-1 ರವರಿಗೆ ಇನ್ನೊಂದು ದಿನ ಚರಂಡಿ ವಿಚಾರಕ್ಕೆ ಬಂದರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಸದರಿ ಆರೋಪಿತರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೋರಿದ್ದು, ಸದರಿ ದೂರನ್ನು ಆಧರಿಸಿ ಆರೋಪಿತರ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ ನಂತರ ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

**3.** ಆರೋಪಿತರು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂಃ 207ರ ಪ್ರಕಾರ ಅಭಿಯೋಜನೆಯ ಪ್ರಕರಣದ ಪ್ರತಿಗಳನ್ನು ಆರೋಪಿತರಿಗೆ ಪೂರೈಸಲಾಯಿತು. ವಾದವನ್ನು ಕೇಳಿದ ನಂತರ ಆರೋಪಿತರನ್ನು ಈ ಪ್ರಕರಣದಿಂದ ಕೈ ಬಿಡಲು ಯಾವುದೇ ಸಕಾರಣಗಳು ಇಲ್ಲದಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ತಯಾರಿಸಿ, ಓದಿ ಹೇಳಿದ್ದು, ಆರೋಪಿತರು ದೋಷಾರೋಪಣೆಯನ್ನು ಅಲ್ಲಗಳೆದು ತಪ್ಪು ಮಾಡಿಲ್ಲ, ಪ್ರಕರಣ ವಿಚಾರಣೆ ಆಗಬೇಕೆಂದು ಕೇಳಿರುತ್ತಾರೆ. ನಂತರ ಪ್ರಕರಣ ಇತ್ಯರ್ಥದಲ್ಲಿರುವಾಗಲೇ 3 ನೇ ಆರೋಪಿಯಾದ ಜಗದೀಶ ಎನ್.ಆರ್ ಬಿನ್ ರುದ್ರಸ್ವಾಮಿ ರವರು ಮೃತಪಟ್ಟಿದ್ದು ಅವರ ವಿರುದ್ಧ ಪ್ರಕರಣವನ್ನು ರದ್ದು (Abated) ಮಾಡಲಾಗಿದೆ.

**4.** ಅಭಿಯೋಜನೆಯ ಪರ ಸಾಕ್ಷಿದಾರರಿಗೆ ತಮ್ಮ ಸಾಕ್ಷ್ಯ ನೀಡಲು ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್ ನೀಡಲಾಯಿತು. ಅಭಿಯೋಜನೆಯು ಚಾಸಾ.1 ರಿಂದ 3, 6, 7 ಮತ್ತು 5 ರವರನ್ನು ಪ್ರಾಸಾ.1 ರಿಂದ ಪ್ರಾಸಾ.6 ಎಂದು ವಿಚಾರಣೆಗೊಳಪಡಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ದಾಖಲೆಗಳನ್ನು ನಿಪಿ.1 ರಿಂದ ನಿಪಿ.4 ಎಂದು ಗುರುತಿಸಿಕೊಂಡಿರುತ್ತಾರೆ ಮತ್ತು ಮುದ್ದೇಮಾಲನ್ನು ಮು.ಮಾ.1 ಮತ್ತು 2 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂಃ 313ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

**5.** ಅಭಿಯೋಜನೆಯ ಪರ ಹಾಗೂ ಆರೋಪಿತರ ಪರ ವಕೀಲರ ವಾದಗಳನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಲಾಯಿತು.

**6.** ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**ಅಂಶ :1** ಃ ದಿನಾಂಕಃ 02.10.2020 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಚನ್ನರಾಯಪಟ್ಟಣ ಟೌನ್, ವಿದ್ಯಾನಗರದ ಸಾಕ್ಷಿ.1 ರವರ ಮನೆಯ ಬಳಿ ಸಾಕ್ಷಿ.1 ರವರು ಸಾಕ್ಷಿ.2 ಮತ್ತು 3 ರವರೊಂದಿಗೆ ಇರುವಾಗ, ಆರೋಪಿತರು ಮಳೆಯನೀರು ಹೋಗಲು ಕಾಂಪೌಂಡ್ ಗೋಡೆಗೆ ತೂತು ಮಾಡಿರುವ ವಿಚಾರದಲ್ಲಿ ದ್ವೇಷವಿಟ್ಟುಕೊಂಡು, ಆರೋಪಿತರು ಸಮಾನ ಉದ್ದೇಶದಿಂದ ಸಾಕ್ಷಿ.1 ರವರ ಜೊತೆ ಜಗಳ ತೆಗೆದು, ಸಾಕ್ಷಿ.1 ರವರನ್ನು ಕುರಿತು ಅವರು ಕುಪಿತರಾಗಿ ಶಾಂತಿಭಂಗವನ್ನುಂಟುಮಾಡಲಿ ಎಂಬ ಉದ್ದೇಶದಿಂದ, ಸಾಕ್ಷಿ.1 ರವರಿಗೆ ಅವಾಚ್ಯ ಶಬ್ದಗಳಿಂದು ಬೈದು, ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂಃ 504** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ ?

**ಅಂಶ :2** ಃ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶವನ್ನು ಹೊಂದಿ, 1 ನೇ ಆರೋಪಿ ಸ್ವಇಚ್ಛೆಯಿಂದ ಮಾರಕಾಯುಧವಾದ ಕಬ್ಬಿಣದ ಹಾರೆಯಿಂದ ಸಾಕ್ಷಿ.1 ರವರಿಗೆ ಹೊಡೆಯಲು ಬಂದಿದ್ದು, ಆಗ ಬಿಡಿಸಲು ಬಂದ ಸಾಕ್ಷಿ.3 ರವರಿಗೆ ಹಾರೆಯಿಂದ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ಗಾಯವಾಗಿ, ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂಃ 324** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ ?

**ಅಂಶ :3** ಃ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶವನ್ನು ಹೊಂದಿ, 1ನೇ ಆರೋಪಿ ನಿಮ್ಮ ಸ್ವಇಚ್ಛೆಯಿಂದ ಕೈಗಳಿಂದ ಸಾಕ್ಷಿ.1 ರವರ ಮೈಕೈಗೆ ಹೊಡೆದು, 2ನೇ ಆರೋಪಿ ಸಾಕ್ಷಿ.1 ರವರ

ತಲೆಕೂದಲು ಹಿಡಿದು ಎಳೆದಾಡಿ, ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿ, ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂಃ 323** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

**ಅಂಶ :4** ಃ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, 1 ಮತ್ತು 2ನೇ ಆರೋಪಿತರು ಸಾಕ್ಷಿ.1 ರವರ ಬಟ್ಟೆಯನ್ನು ಹರಿದು ಹಾಕಿ, ಅವರ ಮಾನಕ್ಕೆ ಕುಂದುಂಟುಮಾಡಿ, ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂಃ 354** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

**ಅಂಶ :5** ಃ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶವನ್ನು ಹೊಂದಿ, ಸಾಕ್ಷಿ.1 ರವರಿಗೆ ಇನ್ನೊಂದು ದಿನ ಚರಂಡಿ ವಿಚಾರಕ್ಕೆ ಬಂದರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟುಮಾಡಿ, ಆ ಮೂಲಕ ಆರೋಪಿತರು **ಭಾರತೀಯ ದಂಡ ಸಂಹಿತೆ ಕಲಂಃ 506** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

**ಅಂಶ – 6** ಃ ಯಾವ ಆದೇಶ ?

**7.** ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆ.

ಅಂಶ 1 ರಿಂದ 5 ಃ **ನಕಾರಾತ್ಮಕವಾಗಿ**
ಅಂಶ 6 ಃ ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

**: : ಕಾರಣಗಳು : :**

**8. ಅಂಶ ಸಂಖ್ಯೆ – 1 ರಿಂದ 5 ಃ** ಸದರಿ ಅಂಶಗಳು ಒಂದಕ್ಕೊಂದು ಪರಸ್ಪರ ಪೂರಕವಾಗಿರುವುದರಿಂದ ಚರ್ಚೆಯ ವೇಳೆ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**9.** ಆರೋಪಿತರ ವಿರುದ್ಧ ಮಾಡಲಾಗಿರುವ ಆರೋಪವನ್ನು ರುಜುವಾತುಪಡಿಸುವ ಹೊಣೆಯು ಅಭಿಯೋಜನೆಯ ಮೇಲಿದ್ದು, ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯ ನಿರ್ಧಿಷ್ಟ ಆರೋಪವೇನೆಂದರೆ, ದಿನಾಂಕ.02-10-2020 ರಂದು ಚನ್ನರಾಯಪಟ್ಟಣ ಟೌನ್ ವಿದ್ಯಾನಗರದ ಸಾಕ್ಷಿ-1 ರವರ ಮನೆ ಬಳಿ ಸಾಕ್ಷಿ-1 ರವರು ಸಾಕ್ಷಿ-2 ಮತ್ತು ಸಾಕ್ಷಿ-3 ರವರೊಂದಿಗೆ ಇರುವಾಗ 1 ರಿಂದ 3ನೇ ಆರೋಪಿತರು ಮಳೆಯ ನೀರು ಹೋಗಲು ಕಾಂಪೌಂಡ್ ಗೋಡೆಗೆ ತೂತು ಮಾಡಿರುವ ವಿಚಾರದಲ್ಲಿ ದ್ವೇಷವಿಟ್ಟುಕೊಂಡು, ಆರೋಪಿತರು ಸಮಾನ ಉದ್ದೇಶದಿಂದ ಸಾಕ್ಷಿ-1 ರವರ ಜೊತೆ ಜಗಳ ತೆಗೆದು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ 1ನೇ ಆರೋಪಿಯು ಸಾಕ್ಷಿ-1 ರವರಿಗೆ ಕಬ್ಬಿಣದ ಹಾರೆಯಿಂದ ಹೊಡೆಯಲು ಬಂದಿದ್ದು ಅಗ ಬಿಡಿಸಲು ಬಂದ ಸಾಕ್ಷಿ-3 ರವರಿಗೆ ಹಾರೆಯಿಂದ ಪೆಟ್ಟುಬಿದ್ದು ಸಾಮಾನ್ಯ ಸ್ವರೂಪದ ಗಾಯವಾಗಿದ್ದು ನಂತರ ಸಾಕ್ಷಿ-1 ರವರಿಗೆ 2ನೇ ಆರೋಪಿಯು ತಲೆ ಕೂದಲು ಹಿಡಿದು ಎಳೆದಾಡಿ ಕೈಗಳಿಂದ ಮೈಕೈಗೆ ಹೊಡೆದು ನೋವುಂಟು ಮಾಡಿ ಅವಾಚ್ಯ ಶಬ್ದಗಳಿಂದ ಬೈಯು ಬಟ್ಟೆಯನ್ನು ಹರಿದು ಹಾಕಿದ್ದು, ನಂತರ 1ನೇ ಆರೋಪಿಯು ಸಾಕ್ಷಿ-1 ರವರಿಗೆ ಕೈಗಳಿಂದ ಮೈ ಕೈಗೆ ಹೊಡೆದು ಸಾಕ್ಷಿ-1 ರವರ ಚೂಡಿದಾರ್ ಟಾಪ್ ನ್ನ ಹರಿದು ಹಾಕಿರುತ್ತಾರೆ, ನಂತರ ಆರೋಪಿತರು ಸಾಕ್ಷಿ-1 ರವರಿಗೆ ಇನ್ನೊಂದು ದಿನ ಚರಂಡಿ ವಿಚಾರಕ್ಕೆ ಬಂದರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿ ಇರುತ್ತದೆ.

**10.** ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪವನ್ನು ಸಾಬೀತುಪಡಿಸುವುದಕ್ಕಾಗಿ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.1 ರವರು ಪಿರ್ಯಾದುದಾರರು ಹಾಗೂ ಮಹಜರ್ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 02.10.2020 ರಂದು ರಾತ್ರಿ 9.30 ಸಮಯದಲ್ಲಿ ತಮ್ಮ ಮನೆಯ ಹೊರಗಡೆ ಚರಂಡಿ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪಿಗಳು ಕೂಗಾಡುತ್ತಿದ್ದರು, ಅದನ್ನು ಕೇಳಿ ತಾನು ತಮ್ಮ ಮನೆಯಿಂದ ಹೊರಗೆ ಬಂದಿರುತ್ತೇನೆ, ಆಗ ಆರೋಪಿಗಳು ಏಕೆ ಚರಂಡಿ ಹೀಗೆ ಮಾಡಿರುತ್ತೀರ ಎಂದು ಕೇಳಿ ತನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, 1ನೇ

ಆರೋಪಿಯು ಕೈನಿಂದ ತನ್ನ ಮುಖಕ್ಕೆ ಹೊಡೆದಿರುತ್ತಾರೆ, 2ನೇ ಆರೋಪಿ ತನ್ನ ಮುಂದಲೆ ಕೂದಲನ್ನು ಹಿಡಿದು ಎಳೆದಾಡಿರುತ್ತಾರೆ, 3ನೇ ಆರೋಪಿಯು ತನ್ನ ಕೈಗಳಿಂದ ತನ್ನ ಮುಖಕ್ಕೆ ಹೊಡೆದಿರುತ್ತಾರೆ, 1ನೇ ಆರೋಪಿಯು ಒಂದು ಕಬ್ಬಿಣದ ರಾಡಿನಿಂದ ಹೊಡೆಯಲು ಮುಂದಾದಾಗ ತಾನು ಕಿರುಚಿಕೊಂಡಾಗ ಚಾಸಾ-2, 3 ರವರು ಬಂದಿದ್ದು, ಚಾಸಾ-3 ರವರು ಕಬ್ಬಿಣದ ರಾಡನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದಾಗ ಅವರ ಕೈಗೆ ಗಾಯವಾಗಿರುತ್ತದೆ, 1ನೇ ಆರೋಪಿಯು ತಾನು ತೊಟ್ಟಿದ್ದ ಬಟ್ಟೆಯನ್ನು ಹರಿದು ಹಾಕಿರುತ್ತಾರೆ, 2ನೇ ಆರೋಪಿಯು ಬೀದಿಯಲ್ಲಿ ತನ್ನನ್ನು ಹಿಡಿದು ಎಳೆದಾಡಿರುತ್ತಾರೆ, 3ನೇ ಆರೋಪಿ ತಮ್ಮ ವಿಚಾರಕ್ಕೆ ಬಂದರೆ ಕೊಲೆ ಮಾಡುತ್ತೇನೆ ಎಂದು ಪ್ರಾಣಬೆದರಿಕೆ ಹಾಕಿರುತ್ತಾನೆ, ನಂತರ ಚಾಸಾ-3 ರವರು ತನ್ನನ್ನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ನಂತರ ಪೋಲೀಸರು ಆಸ್ಪತ್ರೆಗೆ ಬಂದು ತನ್ನ ಹೇಳಿಕೆ ಪಡೆದಿರುತ್ತಾರೆ, ನಂತರ ಸ್ಥಳ ಮಹಜರ್ ಗೆ ಸಹಿಯನ್ನು ಮಾರನೇ ದಿನ ಪೋಲೀಸರು ತಮ್ಮ ಮನೆ ಬಳಿ ಬಂದು ಮಹಜರ್ ಮಾಡಿ ಅಲ್ಲಿಯೇ ಇದ್ದ ಕಬ್ಬಿಣದ ರಾಡು ಮತ್ತು ತನ್ನ ಬಟ್ಟೆಯನ್ನು ತೆಗೆದುಕೊಂಡಾಗ ಮಾಡಿರುತ್ತೇನೆ, ಆ ಸಮಯದಲ್ಲಿ ಚಾಸಾ-4,5 ರವರು ಹಾಜರಿದ್ದು ಸಹಿ ಮಾಡಿರುತ್ತಾರೆ, ಆಗ ಸಮಯ ಬೆಳಿಗ್ಗೆ 9.50 ಆಗಿತ್ತು, ಸ್ಥಳವನ್ನು ತಾನೇ ತೋರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**11.** ಪ್ರಾಸಾ.1 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ನಿಪಿ.1 ರಲ್ಲಿರುವ ವಿಚಾರಗಳು ತಮಗೆ ಗೊತ್ತಿಲ್ಲ ಎಂದು ನುಡಿದಿದ್ದ, ದೂರು ನೀಡುವ ಸಮಯದಲ್ಲಿ 3ನೇ ಆರೋಪಿಯ ಹಸೆರನ್ನು ನಮೂದಿಸಿಲ್ಲ ಎಂದು ನುಡಿದಿರುತ್ತಾರೆ. ಅಲ್ಲದೇ ತನ್ನ ಹಾಗೂ ಆರೋಪಿತರ ವಿರುದ್ಧ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ಚರಂಡಿ ನೀರು ಹೋಗುವ ಸಲುವಾಗಿ ಅದರೆ ಕಾಂಪೌಂಡ್ ಗೋಡೆಗೆ ರಂಧ್ರ ಮಾಡಿದ್ದೇವೆ ಎಂಬುದನ್ನು ಒಪ್ಪಿರುತ್ತಾರೆ. ಅಲ್ಲದೇ ನಿಪಿ.1 ರಲ್ಲಿ ಯಾವ ಬಟ್ಟೆ ಹಡಿದಿರುತ್ತದೆ ಎಂಬುದನ್ನು ಹೇಳಿಲ್ಲ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**12.**ಚಾಸಾ.2 ರವರನ್ನು ಪ್ರಾಸಾ.2 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.2 ರವರು ಪ್ರತ್ಯಕ್ಷ ಸಾಕ್ಷಿದರರಾಗಿದ್ದು, ತನ್ನ ಸಾಕ್ಷ್ಯದಲ್ಲಿ, ದಿನಾಂಕ 02.10.2020 ರಂದು ರಾತ್ರಿ 9.30 ಸಮಯದಲ್ಲಿ ಆರೋಪಿಗಳು ಚರಂಡಿ ವಿಚಾರಕ್ಕೆ ಸಂಬಂಧಿಸಿದಂತೆ ತಮ್ಮ ಬಳಿ ಬಂದು ಚಾಸಾ.1 ರವರಿಗೆ ಅವ್ಯಾಚ ಶಬ್ಧಗಳಿಂದ ಬೈದು 2ನೇ ಆರೋಪಿಯು ಹಾರೆಯಲ್ಲಿ ಚಾಸಾ.1 ರವರಿಗೆ ಹಲ್ಲೆ ಮಾಡಿರುತ್ತಾರೆ, ಹಾಗೇ 1ನೇ ಆರೋಪಿ ಚಾಸಾ.3 ರವರಿಗೆ ಹಾರೆಯಿಂದ ಹೊಡೆದಿರುತ್ತಾರೆ, ನಂತರ ಆರೋಪಿಗಳು

ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ, ತಾನು ಜಗಳ ಬಿಡಿಸಿರುತ್ತೇನೆ, ನಂತರ ಚಾಸಾ.1 ಮತ್ತು 3 ರವರು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರಗೆ ಹೋಗಿರುತ್ತೇನೆ, ಆ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**13.** ಪ್ರಾಸಾ.2 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಆರೋಪಿಗಳು ಚಾಸಾ.1 ರವರ ನಡುವೆ ಕಾಂಪೌಂಡ್ ವಿಚಾರಕ್ಕೆ ಸಂಬಂಧಿಸಿದ ಸಿವಿಲ್ ವ್ಯಾಜ್ಯ ನಡೆಯುತ್ತಿರುವುದನ್ನು ಒಪ್ಪಿರುತ್ತಾರೆ. ಸದರಿ ಸಾಕ್ಷಿಯು ಆರೋಪಿತರ ಕಾಂಪೌಂಡ್ ಗೆ ತೂತು ಮಾಡಿರುವುದನ್ನು ಒಪ್ಪುವುದಿಲ್ಲ. ಆದರೇ ಚಾಸಾ.1 ರವರು ತಮ್ಮ ಪಾಟೀಸವಾಲಿನಲ್ಲಿ ಆರೋಪಿತರ ಕಾಂಪೌಂಡ್ ಗೆ ತಾವು ರಂದ್ರ ಮಾಡಿರುವುದನ್ನು ಒಪ್ಪುತ್ತಾರೆ. ಅಲ್ಲದೇ ಮು.ಮಾ.1 ನ್ನು ಆರೋಪಿತರು ಎಲ್ಲಿಂದ ತಂದಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲ ಎಂದು ನುಡಿದಿದ್ದು, ಮುಖ್ಯ ವಿಚಾರಣೆಯಲ್ಲಿ ತಾವು ಮನೆಕೆಲಸದ ಸಲಕರಣೆಗಳನ್ನು ತಮ್ಮ ಬಳಿ ಇದ್ದುಕೊಂಡಿರುವುದನ್ನು ಒಪ್ಪುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**14.** ಚಾಸಾ.3 ರವರನ್ನು ಪ್ರಾಸಾ.3 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.3 ರವರು ನೊಂದ ಸಾಕ್ಷಿದಾರರಾಗಿದ್ದು, ತನ್ನ ಸಾಕ್ಷ್ಯದಲ್ಲಿ, ದಿಃ 02.10.2020 ರಂದು ರಾತ್ರಿ 9.30 ರ ಸಮಯದಲ್ಲಿ ಆರೋಪಿ 1 ಮತ್ತು 2 ರವರು ವಿದ್ಯಾನಗರದ ತಮ್ಮ ಮನೆಯ ಬಳಿ ಬಂದು ಮಳೆ ನೀರು ಹೋಗದ ಕಾರಣ ಕಾಂಪೌಂಡಿಗೆ ತೂತು ಮಾಡಿದ ವಿಚಾರವಾಗಿ ಚಾಸಾ-1 ಮತ್ತು ಆರೋಪಿಗಳ ನಡುವೆ ಜಗಳ ಆಗುತ್ತಿದ್ದು, 1ನೇ ಆರೋಪಿ ಹಾರೆಯಲ್ಲಿ ಚಾಸಾ-1 ರವರಿಗೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ತಾನು ತಪ್ಪಿಸಲು ಅಡ್ಡ ಹೋದಾಗ ಏಟು ತನ್ನ ಬಲಗೈಗೆ ಬಿದ್ದಿರುತ್ತದೆ, 1 ಮತ್ತು 2ನೇ ಆರೋಪಿ ಚಾಸಾ-1 ರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ, ನಂತರ ತಾನು ಮತ್ತು ಚಾಸಾ-1 ರವರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇವೆ, ಈ ಸಂಬಂಧ ತಾನು ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

**15.** ಪ್ರಾಸಾ.3 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.3 ರವರನ್ನು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಆದರೇ, ಪಾಟೀಸವಾಲಿನಲ್ಲಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ. ನಂತರ ಪ್ರಾಸಾ.3 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಎಲ್ಲಾ

ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಸದರಿಯವರು ಚಾಸಾ.1 ಮತ್ತು ಆರೋಪಿತರ ನಡುವೆ ಕಾಂಪೌಂಡ್ ಮುತತ ಮನೆ ಸಂಬಂಧ ಸಿವಿಲ್ ದಾವೆ ಇದೆ ಎಂದು ನುಡಿದಿದ್ದು, ಕಂಪೌಂಡ್ ಗೋಡೆಗೆ ಚಾಸಾ.1 ರವರು ಹಾರೆಯಿಂದ ತೂತು ಮಾಡಿದ್ದರು ಎಂದು ಒಪ್ಪಿರುತ್ತಾರೆ. ಚಾಸಾ.1 ರವರ ಚೂಡಿದಾರಿನ ಭಾಗ ಹರಿದಿರುತ್ತದೆ ಎಂದು ನುಡಿದಿದ್ದು, ಯಾವ ಭಾಗದಲ್ಲಿ ಹರಿದಿದೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅಲ್ಲದೇ ಆರೋಪಿತರು ತನ್ನ ಹಾಗೂ ಚಾಸಾ.1 ರವರ ವಿರುದ್ಧ ದೂರು ನೀಡಿರುವುದಾಗಿ ಒಪ್ಪಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**16.** ಚಾಸಾ.6 ರವರನ್ನು ಪ್ರಾಸಾ.4 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.4 ರವರು ವೈಧ್ಯಾದಿಕಾರಿಯಾಗಿದ್ದು, ಸದರಿಯವರು ಚಾಸಾ.1 ಮತ್ತು 3 ರವರಿಗೆ ಹಲ್ಲೆಯ ಸಂಬಂಧ ಚಿಕಿತ್ಸೆ ನೀಡಿ ತನಿಖಾಧಿಕಾರಿಗೆ ಗಾಯದ ಪ್ರಮಾಣ ಪತ್ರ ನೀಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯು ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿದ್ದು, ಮುಂದುವರೆದು ನಿಪಿ.3 ಮತ್ತು 4 ರಲ್ಲಿ ಆಯುಧವನ್ನು ನಮೂದಿಸಿಲ್ಲ ಎಂದರೆ ಸರಿ ಎಂದು ನುಡಿದಿರುತ್ತಾರೆ. ಚಾಸಾ.1 ಮತ್ತು 3 ರವರಿಗೆ ಆಗಿದ್ದ ಗಾಯಗಳು ಅವರು ವಾಹನದಲ್ಲಿ ಹೋಗುವಾಗ ಆಯ ತಪ್ಪಿಬಿದ್ದಾಗಲೂ ಆಗುವ ಸಾಧ್ಯತೆ ಇದೆ ಎಂದು ನುಡಿದಿರುತ್ತಾರೆ.

**17.** ಚಾಸಾ.7 ರವರನ್ನು ಪ್ರಾಸಾ.5 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.5 ರವರು ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ತಾನು ತನಿಖೆಯನ್ನು ಕೈಗೊಂಡ ಬಗ್ಗೆ ಮತ್ತು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನುಡಿದಿರುತ್ತಾರೆ.

**18.** ಚಾಸಾ.5 ರವರನ್ನು ಪ್ರಾಸಾ.6 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.6 ರವರು ಮಹಜರ್ ಸಾಕ್ಷಿದಾರರಾಗಿದ್ದು, ತನ್ನ ಸಾಕ್ಷ್ಯದಲ್ಲಿ, ದಿಃ 03.10.2020 ರಂದು ಬೆಳಗ್ಗೆ 9.15 ರಿಂದ 10.00 ಗಂಟೆ ಸಮಯದಲ್ಲಿ ಪೋಲೀಸರು ಗಲಾಟೆ ಸ್ಥಳಕ್ಕೆ ಬಂದು ಚಾಸಾ-1 ರವರು ಸ್ಥಳವನ್ನು ತೋರಿಸಿದ್ದು, ತನ್ನ ಮತ್ತು ಚಾಸಾ-4 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಚಾಸಾ-1 ರವರಿಂದ ಕಬ್ಬಿಣದ ಹಾರೆ ಮತ್ತು ಚೂಡಿದಾರ ಟಾಪ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

**19.** ಪ್ರಾಸಾ.6 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರ ಎಲ್ಲಾ ಸೂಚನೆಗಳನ್ನು

ಅಲ್ಲಗಳೆದಿರುತ್ತಾರೆ. ಮುಂದುವರೆದು ನಿಪಿ.2 ಮಹಜರ್ ನಲ್ಲಿರುವ ಕೆಲವು ಅಂಶಗಳು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಹೀಗಾಗಿ ಸದರಿ ಸಾಕ್ಷಿಯು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**20.** ಈ ಪ್ರಕರಣದಲ್ಲಿ ಪ್ರಾಸಾ.1 ರವರು ಪಿರ್ಯಾದುದಾರರಾಗಿದ್ದು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ ನಿಪಿ.1ರಲ್ಲಿರುವ ಅಂಶಗಳು ಮರೆತು ಹೋಗಿದೆ ಎಂದು ನುಡಿದಿದ್ದು, ಅಭಿಯೋಜನೆಗೆ ಪೂರಕವಾದ ಸಾಕ್ಷಿ ನುಡಿದಿರುವುದಿಲ್ಲ. ಪ್ರಾಸಾ.2 ಮತ್ತು 3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯಗಳಲ್ಲಿ ಆರೋಪಿತರ ಹಾಗೂ ತಮ್ಮ ನಡುವೆ ಸಿವಿಲ್ ವ್ಯಾಜ್ಯ ಇರುವುದನ್ನು ಒಪ್ಪಿದ್ದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ.6 ರವರು ಮಹಜರ್ ಸಾಕ್ಷಿಯಾಗಿದ್ದು, ತಾನು ಚಾಸಾ.1 ರವರು ಕರೆದಿದ್ದರಿಂದ ಮಹಜರಿಗೆ ಬಂದಿದ್ದಾಗಿ ನುಡಿದಿರುತ್ತಾರೆ ಹಾಗೂ ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ. ಈಗ್ಗೆ ಸಾಕ್ಷ್ಯದಾರರು ಅಭಿಯೋಜನಗೆ ಪೂರಕವಾದ ಯಾವುದೇ ಸಾಕ್ಷ್ಯ ನೀಡದ ಕಾರಣ ಅಭಿಯೋಜನೆಯು ಆರೋಪಿತರ ಮೇಲಿನ ಆರೋಪಗಳನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ವಿಫಲವಾಗಿರುತ್ತದೆ. ಈ ಮೇಲೆ ಚರ್ಚಿಸಿರುವಂತೆ ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂಬ ಸ್ಪಷ್ಟ ಅಭಿಪ್ರಾಯಕ್ಕೆ ಬಂದು **ಅಂಶ ಸಂಖ್ಯೆ 1 ರಿಂದ 5 ನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿರುತ್ತದೆ.

**21.** **ಅಂಶ ಸಂಖ್ಯೆ ೦ಃ 6** ಅಂಶ 1 ರಿಂದ 5 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

**೦ಃಃ ಆದೇಶ ೦ಃಃ**

ದಂ.ಪ್ರ.ಸಂ. ಕಲಂಃ 248(1) ರನ್ವಯ 1 ಮತ್ತು 2 ನೇ ಆರೋಪಿತರು **ಭಾ.ದಂ.ಸಂ. ಕಲಂಃ 506, 504, 323, 324 ಮತ್ತು 354 ಸಹವಾಚಕ ಕಲಂಃ 34** ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳು ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

1 ಮತ್ತು 2 ನೇ ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

ಮು.ಮಾ.1 ಬೆಲೆ ಉಳ್ಳದ್ದಾಗಿದ್ದು, ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು

ಮು.ಮಾ.2 ಬೆಲೆ ರಹಿತವಾಗಿದ್ದು, ಅಪೀಲು ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಅವರಿಂದ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ಇಂದು ದಿನಾಂಕಃ **10ನೇ ಜುಲೈ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**: : ಪರಿಚ್ಛೇದ : :**

**1. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ .**

ಪ್ರಾಸಾ.1 : ರಾಣಿ
ಪ್ರಾಸಾ.2 : ಪೂಜ
ಪ್ರಾಸಾ.3 : ಪವನ್
ಪ್ರಾಸಾ.4 : ಡಾ. ಮಾಲಿನಿ
ಪ್ರಾಸಾ.5 : ಡಿ. ಕೃಷ್ಣೇಗೌಡ
ಪ್ರಾಸಾ.6 : ಭರತ್

**2. ಅಭಿಯೋಜನೆಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

ನಿಪಿ.1 : ದೂರು
ನಿಪಿ.1(ಎ,ಬಿ) : ಸಹಿಗಳು
ನಿಪಿ.2 : ಕೃತ್ಯ ಸ್ಥಳ ಮಹಜರ್
ನಿಪಿ.2(ಎ,ಬಿ,ಸಿ) : ಸಹಿಗಳು
ನಿಪಿ.3,4 : ಗಾಯದ ಪ್ರಮಾಣ ಪತ್ರಗಳು
ನಿಪಿ.3(ಎ,ಬಿ),4(ಎ,ಬಿ): ಸಹಿಗಳು

**3. ಆರೋಪಿಗಳ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ :**ಇಲ್ಲ

**4. ಆರೋಪಿಗಳ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ :** ಇಲ್ಲ

**5. ಅಭಿಯೋಜನೆಯ ಪರ ಗುರುತಿಸಲಾದ ಮುದ್ದೇಮಾಲುಗಳ ಪಟ್ಟಿ :**

ಮು.ಮಾ.1 -ಃ ಕಬ್ಬಿಣದ ರಾಡು
ಮು.ಮಾ.2 -ಃ ಬಟ್ಟೆ

**(ಶ್ರೀಮತಿ ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**(ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**
**(ತೀರ್ಪಿನ ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.)**

**ಃಃ ಆದೇಶ ಃಃ**

ದಂ.ಪ್ರ.ಸಂ. ಕಲಂಃ 248(1) ರನ್ವಯ 1 ಮತ್ತು 2 ನೇ ಆರೋಪಿತರು **ಭಾ.ದಂ.ಸಂ. ಕಲಂಃ 506, 504, 323, 324 ಮತ್ತು 354 ಸಹವಾಚಕ ಕಲಂಃ 34** ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳು ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

1 ಮತ್ತು 2 ನೇ ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

ಮು.ಮಾ.1 ಬೆಲೆ ಉಳ್ಳದ್ದಾಗಿದ್ದು, ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಮು.ಮಾ.2 ಬೆಲೆ ರಹಿತವಾಗಿದ್ದು, ಅಪೀಲು ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.